ದಿನಾಂಕಃ- 02.04.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ.ಎಂಬಿಆರ್ ವಕೀಲರಿಂದಃ-

57. ಲೋಕಾಯುಕ್ತ ಪೊಲೀಸರ ಕಛೇರಿಯ ಒಳಗೆ ಹೋಗುವ ಮೊದಲು 3 ಸಾರಿ ನಾನು ಆರೋಪಿ ಗೋವಿಂದರಾಜು ರವರನ್ನು ಭೇಟಿಯಾಗಿದ್ದೇನೆ. ನಾನು ಯಾವ ದಿನಾಂಕದಂದು ಆರೋಪಿ ಗೋವಿಂದರಾಜು ರವರನ್ನು ಭೇಟಿಯಾಗಿದ್ದೇನೆ ಎಂದು ಈಗ ಹೇಳಲು ಆಗುವುದಿಲ್ಲ.

58. 2013 ರಿಂದ 26.11.2015 ರವರೆಗೆ ನಮ್ಮ ಜಮೀನಿನಲ್ಲಿ ಇರುವ ಪಂಪು ಸೆಟ್ ಗೆ ವಿದ್ಯುತ್ ಪೂರೈಸಲು transformer ಕೂರಿಸುವಂತೆ ವಿದ್ಯುತ್ ಇಲಾಖೆಯ ಯಾವುದೇ ಅಧಿಕಾರಿಗಳನ್ನು ನಾನು ಭೇಟಿಯಾಗಿಲ್ಲ.

59. ನಾನು ಟಿ ಸಿ (transformer) ಆರೋಪಿ ಗೋವಿಂದರಾಜು ರವರನ್ನು ಒಂದು ಸಾರಿ ಕಛೇರಿಯ ಹತ್ತಿರ, ಒಂದು ಸಾರಿ ಕಛೇರಿಯ ಒಳಗೆ, ಮತ್ತೊಂದು ಸಾರಿ ಶಿವಪುರ ಆಸ್ಪತ್ರೆಯ ಹತ್ತಿರ ಭೇಟಿಯಾಗಿದ್ದೇನೆ. ಆ ಸಮಯಗಳಲ್ಲಿ ನಾನು ಧ್ವನಿ ಮುದ್ರಣ ಮಾಡಿಕೊಳ್ಳಬಹುದಾದಂತಹ ಮೊಬೈಲುಗಳನ್ನು ಹಿಡಿದುಕೊಂಡಿರಲಿಲ್ಲ.

60. ನಾನು ಲೋಕಾಯುಕ್ತ ಪೊಲೀಸರಿಗೆ ದೂರು ಕೊಡುವ ಮೊದಲು ಆರೋಪಿಗೆ ರೂ 3,000/- ಹಣ ಕೊಟ್ಟಿದ್ದನ್ನು ಚಾಸಾ-4 ನೇ ಲೋಕಿ ಮಾತ್ರ ನೋಡಿದ್ದಾನೆ. ನಾನು ಆರೋಪಿಗೆ ರೂ 3,000/- + ರೂ 2,000/- + ರೂ 5,000/- (ಒಟ್ಟು ರೂ 10,000/-) ಗಳನ್ನು ಕೊಟ್ಟಿರುವ ವಿಚಾರವನ್ನು ದೂರಿನಲ್ಲಿ ಬರೆಸಿದ್ದೇನೆ. ನಾನು ಆರೋಪಿಗೆ ಹಣ ಕೊಟ್ಟಿದ್ದನ್ನು ಕೇವಲ ಚಾಸಾ-4 ನೇ ಲೋಕಿ ನೋಡಿದ್ದಾನೆ. ನಾನು ರೂ 10,000/-ಗಳನ್ನು ಟಿಸಿ ಗಾಗಿ ನನ್ನ ಪರವಾಗಿ ಮತ್ತು ಚೆನ್ನಮ್ಮ, ಬೋರೆಗೌಡ, ಪುಟ್ಟಸ್ವಾಮಿ ರವರುಗಳ ಪರವಾಗಿ ಕೊಟ್ಟಿದ್ದೇನೆ. ನಾನು ಚೆನ್ನಮ್ಮ, ಬೋರೆಗೌಡ, ಪುಟ್ಟಸ್ವಾಮಿ ರವರುಗಳಿಗೆ ಆರೋಪಿ ಗೋವಿಂದರಾಜು ಹಣ ಕೇಳುತ್ತಿದ್ದಾನೆ ಎಂದು ತಿಳಿಸಿದ್ದೇನೆ, ಆದರೆ ಅವರುಗಳಿಂದ ಹಣ ಸಂಗ್ರಹ ಮಾಡಿಲ್ಲ. ಗೋವಿಂದರಾಜು ನನ್ನ ಹತ್ತಿರ ಅಥವಾ ಲೋಕಿ ಹತ್ತಿರ ಹಣ ಕೇಳಿದ್ದನ್ನು ರೆಕಾರ್ಡು ಮಾಡಿಕೊಂಡಿಲ್ಲ.

61. ನಾನು ಲೋಕಾಯುಕ್ತ ಪೊಲೀಸರನ್ನು ಭೇಟಿಯಾದ ನಂತರ ಮೊದಲ ಬಾರಿಗೆ ಲೋಕಾಯುಕ್ತ ಪೊಲೀಸರು ಆರೋಪಿ ಹಣ ಕೇಳುವುದನ್ನು ರೆಕಾರ್ಡ್ ಮಾಡಿಕೊಂಡು ಬರುವಂತೆ ತಿಳಿಸಿದ್ದಾರೆ.

62. ನಾನು ಮತ್ತು ಲೋಕಿ ಲೋಕಾಯುಕ್ತ ಪೊಲೀಸರು ಕೊಟ್ಟಿದ್ದ voice recorder ಅನ್ನು on ಮಾಡಿ ಜೇಬಿನಲ್ಲಿ ಇಟ್ಟುಕೊಂಡು ಆರೋಪಿ ಹತ್ತಿರ ಹೋಗಿ ಟಿಸಿ ಬಗ್ಗೆ ವಿಚಾರಿಸಿದಾಗ ಆತ ಹಣ ತಂದಿರುವೆಯಾ ಎಂದು ಕೇಳಿದ್ದಾನೆ. ಸದರಿ ಮಾತುಕತೆ voice recorder ನಲ್ಲಿ ಮುದ್ರಣವಾಗಿದೆ. ನಾನು ಮತ್ತು ಲೋಕಿ ಆರೋಪಿಯನ್ನು ಭೇಟಿಯಾದಾಗ ನಾನು ಆರೋಪಿಯ ಹತ್ತಿರ ಮಾತನಾಡಿದ್ದೇನೆ.

63. ಲೋಕಾಯುಕ್ತ ಪೊಲೀಸರ ಸಮಕ್ಷಮ ಹಾಜರು ಪಡಿಸಿದ ಮುದ್ರಿತವಾದ ಸಂಭಾಷಣೆಯಲ್ಲಿ ನನ್ನ ಧ್ವನಿ, ಲೋಕೇಶನ ಧ್ವನಿ, ಆರೋಪಿ ಗೋವಿಂದರಾಜುವಿನ ಧ್ವನಿ ಮತ್ತು ಆ ಸಮಯದಲ್ಲಿ ನಾವು ಇದ್ದ ಸ್ಥಳಕ್ಕೆ ಬಂದ lineman ರವರ ಧ್ವನಿ ಇದೆ. ನಾನು, ಆರೋಪಿ ಗೋವಿಂದರಾಜು, ಲೋಕೇಶ ಮಾತನಾಡುತ್ತಿರುವಾಗ ಬಂದ ಒಬ್ಬ lineman ಗೆ ಆರೋಪಿ ಇವರಿಗೆ ಕಂಬ ಎತ್ತಬೇಕಂತೆ ಅದಕ್ಕಾಗಿ ರೂ 5,000/- ಗಳನ್ನು ಕೊಡಬೇಕಾಗುತ್ತದೆ ಎಂದು ನಮಗೆ ಹೇಳಿದನು. ಸದರಿ ಧ್ವನಿಯ ಸಹಿತ ಮುದ್ರಣವಾಗಿದೆ. ಆ lineman ಹೆಸರು ನನಗೆ ಗೊತ್ತಿಲ್ಲ.

64. ಲೋಕಾಯುಕ್ತ ಪೊಲೀಸರ ಕಛೇರಿಯಲ್ಲಿ ಮುದ್ರಿತವಾದ ಧ್ವನಿಯನ್ನು ಕೇಳಿಸಿದಾಗ ತಯಾರಿಸಿದ ದಾಖಲೆಯಲ್ಲಿ ನನ್ನ ಧ್ವನಿಯು ಕೇಳಿಸಿತು ಎಂದು ಬರೆದಿದೆಯಾ ಅಥವಾ ಇಲ್ಲವಾ ಎಂದು ನನಗೆ ಈಗ ಗೊತ್ತಿಲ್ಲ. ಮುದ್ರಿತವಾದ ಸಂಭಾಷಣೆಯಲ್ಲಿ ಮಹೇಶ ಎನ್ನುವವರ ಧ್ವನಿ ಇಲ್ಲ.

65. ನಾನು ಮತ್ತು ಲೋಕಿ ನಾವು ಆರೋಪಿಯ ಜೊತೆ ನಡೆಸಿದ ಸಂಭಾಷಣೆಯನ್ನು ರೆಕಾರ್ಡ್ ಮಾಡಿದಾಗ ಮಹೇಶ ಎನ್ನುವವರು ಇರಲಿಲ್ಲ. ಮುದ್ರಿತವಾದ ಸಂಭಾಷಣೆಯಲ್ಲಿ ಆರೋಪಿ ಹಣ ಕೇಳಿದ ವಿಚಾರ ಮಾತ್ರ ನನಗೆ ಗೊತ್ತಿದೆ. ಉಳಿದ ವಿಚಾರ ನನಗೆ ಗೊತ್ತಿಲ್ಲ.

66. ಆರೋಪಿ ಗೋವಿಂದರಾಜು ಟಿಸಿ ಗಾಗಿ ನನ್ನ ಹತ್ತಿರ ಪದೇ ಪದೇ ಹಣ ಕೇಳಿಲ್ಲ ಅಥವಾ ರೂ 3,000/- ಅಥವಾ ರೂ 2,000/- ಹಣ ಕೇಳಿಲ್ಲ ಎನ್ನುವುದು ಸರಿಯಲ್ಲ.

67. ನಾನಾಗಲೀ ಲೋಕಿಯಾಗಲೀ ಲೋಕಾಯುಕ್ತ ಪೊಲೀಸರಿಂದ voice recorder ಅನ್ನು ತೆಗೆದುಕೊಂಡು ಹೋಗಿ ಆರೋಪಿಯ ಧ್ವನಿಯನ್ನು ರೆಕಾರ್ಡ ಮಾಡಿಲ್ಲ ಎನ್ನುವುದು ಸರಿಯಲ್ಲ.

68. ನನ್ನ ಜಮೀನು, ರತ್ನಮ್ಮ, ಬೋರೆಗೌಡ ಮತ್ತು ಪುಟ್ಟಸ್ವಾಮಿ ರವರ ಜಮೀನುಗಳಿಗೆ ವಿದ್ಯುತ್ ಪೂರೈಸಲು ಟಿಸಿ ಕೂರಿಸಲು 10 ಕಂಬಗಳನ್ನು ನೆಡಬೇಕಾಗಿತ್ತು. ನನ್ನ ಮತ್ತು ಮೇಲೆ ಹೇಳಿದ 3 ಜನರ ಮಾಲೀಕತ್ವದ ಪಂಪು ಸೆಟ್ಟುಗಳು ಒಂದೇ ಕಡೆ ಇರಬೇಕಾಗಿತ್ತು.

69. ಲೋಕಾಯುಕ್ತ ಪೊಲೀಸರ ಕಛೇರಿಯಲ್ಲಿ ನಾನು ಒಂದು ಅಥವಾ ಎರಡು ಸಹಿ ಮಾಡಿದ್ದೇನೆ. ನಾನು ವಿದ್ಯಾಭ್ಯಾಸ ಮಾಡದೇ ಇರುವುದರಿಂದ ನಾನು ಸಹಿ ಮಾಡಿರುವ ದಾಖಲೆಗಳ ಗುರುತನ್ನು ಹೇಳಲಾಗುವುದಿಲ್ಲ. ನಾನು ಲೋಕಾಯುಕ್ತ ಪೊಲೀಸರ ಕಛೇರಿಯಲ್ಲಿ ಸಹಿ ಮಾಡಿರುವ ದಾಖಲೆಗಳಲ್ಲಿ ಏನು ವಿಚಾರ ಬರೆದಿದೆ ಎನ್ನುವುದನ್ನು ಹೇಳಲಾಗುವುದಿಲ್ಲ. ನಾನು ಲೋಕಾಯುಕ್ತ ಪೊಲೀಸರ ಕಛೇರಿಯಲ್ಲಿ ದಾಖಲೆಗಳ ಮೇಲೆ ಸಹಿ ಮಾಡಿದಾಗ ಮಹೇಶ ಎನ್ನುವವರ ಹೆಸರು ಬಂದಿಲ್ಲ.

70. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಮಹೇಶ ಎನ್ನುವವರ ಕುರಿತು ಯಾವುದೇ ಮಾಹಿತಿ ಇಲ್ಲ. ನಾನು ಲೋಕಾಯುಕ್ತ ಪೊಲೀಸರ ಕಛೇರಿಯಲ್ಲಿ ಸಾಕ್ಷಿದಾರರಾದ ವೈ.ಡಿ.ಹನುಮಂತ ಮತ್ತು ಜೆ.ಆರ್.ಜಗದೀಶ ರವರ ಹತ್ತಿರ ಟಿಸಿ ಕೂರಿಸುವ ಕುರಿತು ವಿದ್ಯುತ್ ಚ್ಚಕ್ತಿ ಇಲಾಖೆಯವರು ಹಣ ಕೇಳುತ್ತಿದ್ದಾರೆ ಎಂದು ಸಂಭಾಷಣೆ ಮಾಡಿದ್ದೇನೆ. ನನ್ನ ಸಮಕ್ಷಮ ಲೋಕಾಯುಕ್ತ ಪೊಲೀಸರು ಸಾಕ್ಷಿದಾರರಾದ ವೈ.ಡಿ.ಹನುಮಂತ ಮತ್ತು ಜೆ.ಆರ್.ಜಗದೀಶ ರವರಿಗೆ ಯಾವುದಾದರೂ ದಾಖಲೆಗಳನ್ನು ಕೊಟ್ಟು ಓದಿಸಿದ್ದಾರೆಯೇ ಎನ್ನುವುದು ನನಗೆ ಈಗ ಗೊತ್ತಿಲ್ಲ.

71. ಲೋಕಾಯುಕ್ತ ಪೊಲೀಸರ ಕಛೇರಿಯಲ್ಲಿ ಗುಲಾಬಿ ಬಣ್ಣದ ಧ್ರಾವಣ ತಯಾರಿಸುವುದನ್ನು ನನಗೆ ತೋರಿಸಿದ್ದಾರೆ.

72. ಲೋಕಾಯುಕ್ತ ಪೊಲೀಸರ ಕಛೇರಿಯಲ್ಲಿ ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 2.30 ಗಂಟೆಯವರೆಗೆ ನಾನು ಮತ್ತು ಲೋಕಿ ಇದ್ದೆವು. ಲೋಕಾಯುಕ್ತ ಪೊಲೀಸರ ಕಛೇರಿಯಲ್ಲಿ ನನ್ನ ಸಮಕ್ಷಮ ಪೊಲೀಸರು ಯಾವುದೇ ರೀತಿಯ ಧ್ರಾವಣವನ್ನು ತಯಾರಿಸಿಲ್ಲ, ಯಾವುದೇ ಚಟುವಟಿಕೆ ಮಾಡಿಲ್ಲ ಎನ್ನುವುದು ಸರಿಯಲ್ಲ.

73. ನಾವು ಮಧ್ಯಾಹ್ನ ಸುಮಾರು 3.15 ಗಂಟೆಯಿಂದ 5.00 ಗಂಟೆಯವರೆಗೆ ಮದ್ದೂರಿನಲ್ಲಿ ಇದ್ದೆವು. ಮದ್ದೂರಿನಲ್ಲಿ ಘಟನೆ ನಡೆದ ಸ್ಥಳ ನ್ಯಾಯಾಲಯದ ಹಿಂಭಾಗ ಇದೆ, ಸದರಿ ಸ್ಥಳವನ್ನು ಅರಳಿ ಮರ ವೃತ್ತ ಎಂದು ಗುರುತಿಸುತ್ತಾರೆ. ಅರಳಿ ಮರದ ವೃತ್ತದಲ್ಲಿ ನ್ಯಾಯಾಲಯದ ರಸ್ತೆ, ಪೇಟೆ ಬೀದಿ, ಮತ್ತು ಮದ್ದೂರು ನಗರದ ಒಳಗೆ/ಕೆಇಬಿ ಕಛೇರಿಗೆ ತಲುಪುವ ರಸ್ತೆ ಸೇರುತ್ತದೆ. ಅರಳಿ ಮರ ವೃತ್ತದಲ್ಲಿ ಬೆಳಿಗ್ಗೆ 6.00 ಗಂಟೆಯಿಂದ ರಾತ್ರಿ 9.00 ಗಂಟೆಯವರಗೆ ಸಾರ್ವಜನಿಕರು ಓಡಾಡುತ್ತಿರುತ್ತಾರೆ ಮತ್ತು ವಾಹನಗಳು ಓಡಾಡುತ್ತಿರುತ್ತವೆ.

74. ಘಟನೆ ನಡೆದ ಸಮಯದಲ್ಲಿ ಆರೋಪಿ ನ್ಯಾಯಾಲಯದ ಹಿಂಭಾಗದ ರಸ್ತೆಯಲ್ಲಿ ಕೆಂಪು ಬಣ್ಣದ ಬುಲೇರೋ ವಾಹನದಲ್ಲಿ ಅರಳಿ ಮರದ ವೃತ್ತಕ್ಕೆ ಬಂದನು. ಅರಳಿ ಮರದ ವೃತ್ತದಲ್ಲಿ ಆರೋಪಿ ನನಗೆ ಹಣ ತಂದಿರುವೆಯಾ ಎಂದು ಕೇಳಿದರು ನಾನು ತಂದಿದ್ದೇನೆ ಎಂದು ಹೇಳಿದೆನು. ಆದರೆ ಯಾವುದೇ ದಾಖಲೆಗಳನ್ನು ನಾನು ತೋರಿಸಲಿಲ್ಲ ಅವರು ಕೇಳಲಿಲ್ಲ. ಆ ದಿನದವರೆಗೆ ವಿದ್ಯುತ್ ಚ್ಚಕ್ತಿ ಇಲಾಖೆಯವರು ನಮ್ಮ ಜಮೀನಿನಲ್ಲಿ ಟಿಸಿ ಕೂರಿಸುವ ಬಗ್ಗೆ ಕಂಬಗಳನ್ನು ನೆಡುವ ಕೆಲಸ ಮಾಡಿರಲಿಲ್ಲ. ಆ ಸಮಯದಲ್ಲಿ ನಮ್ಮ ಕೆಲಸದ ಕುರಿತು ನಾನು ಮತ್ತು ಆರೋಪಿ ಯಾವುದೇ ಚರ್ಚೆ ನಡೆಸಲಿಲ್ಲ. ಆರೋಪಿ ಒಬ್ಬನೇ ಕೆಂಪು ಬಣ್ಣದ ಬುಲೇರೋ ವಾಹನವನ್ನು ಓಡಿಸಿಕೊಂಡು ಬಂದರು. ಆ ಸಮಯದಲ್ಲಿ ಲೋಕಾಯುಕ್ತ ಪೊಲೀಸರು ಎಲ್ಲಿ ಇದ್ದರು ಎನ್ನುವುದು ನನಗೆ ಗೊತ್ತಿಲ್ಲ.

75. ಬುಲೇರೋ ವಾಹನದ ಹತ್ತಿರ ನಾನು ಮತ್ತು ಆರೋಪಿ ಪರಸ್ಪರ ಮಾತನಾಡಿದ ಜಾಗದಲ್ಲಿ ಯಾವುದೇ ದಾಖಲೆಗಳನ್ನು ತಯಾರಿಸಲಿಲ್ಲ. ಆದರೆ ಬಹಳ ಜನರು ಸುತ್ತುವರೆದರು. ಆನಂತರ ಮಂಡ್ಯ ಲೋಕಾಯುಕ್ತ ಪೊಲೀಸರ ಕಛೇರಿಗೆ ಪೊಲೀಸರು ಆರೋಪಿಯನ್ನು ಕರೆತಂದರು.

76. ಅರಳಿ ಮರ ವೃತ್ತದಲ್ಲಿ ಆರೋಪಿ ಕೆಂಪು ಬಣ್ಣದ ಬುಲೇರೋ ವಾಹನದಿಂದ ಕೆಳಗೆ ಇಳಿಯಲಿಲ್ಲ. ನಾನು ಆರೋಪಿಯ ಕೈಗೆ ಹಣ ಕೊಟ್ಟ ನಂತರ ಆರೋಪಿ ಬುಲೇರೋ ವಾಹನದಿಂದ ಕೆಳಗೆ ಇಳಿದರು.

77. ಮದ್ದೂರಿನ ಅರಳಿ ಮರದ ವೃತ್ತದಲ್ಲಿ ಆರೋಪಿ ಬುಲೇರೋ ವಾಹನದಲ್ಲಿ ಕುಳಿತಿದ್ದಾಗ ಆತನ ಕೈಗೆ ನಾನು ಹಣ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಮದ್ದೂರಿನ ಅರಳಿ ಮರ ವೃತ್ತಕ್ಕೆ ಆರೋಪಿ ಬುಲೇರೋ ವಾಹನದಲ್ಲಿ ಬಂದ ಕೂಡಲೇ ಲೋಕಾಯುಕ್ತ ಪೊಲೀಸರು ಆತನನ್ನು ಮಂಡ್ಯ ಲೋಕಾಯುಕ್ತ ಪೊಲೀಸರ ಕಛೇರಿಗೆ ಕರೆತಂದರು ಎನ್ನುವುದು ಸರಿಯಲ್ಲ.

78. ಪ್ರಶ್ನೆ- ನೀವು ಮದ್ದೂರು ಅರಳಿ ಮರ ವೃತ್ತದಲ್ಲಿ ಬುಲೇರೋ ವಾಹನದ ಒಳಗೆ ಕುಳಿತಿದ್ದ ಆರೋಪಿಯ ಕೈಗೆ ಹಣ ಕೊಟ್ಟಿದ್ದನ್ನು ಯಾವುದೇ ವ್ಯಕ್ತಿಗಳು ನೋಡಿಲ್ಲ ?

ಉತ್ತರ- ಕೋಟ್ಯಾಂತರ ಜನರು ನೋಡಿದ್ದಾರೆ, ದಿನಪತ್ರಿಕೆಗಳಲ್ಲಿ ವರದಿಯಾಗಿದೆ.

79. ಆ ದಿನ ರಾತ್ರಿ 3.00 ಗಂಟೆಯವರೆಗೆ (ಬೆಳಗಿನ ಜಾವ) ನಾವು ಮಂಡ್ಯ ಲೋಕಾಯುಕ್ತ ಪೊಲೀಸರ ಕಛೇರಿಯಲ್ಲಿ ಇದ್ದೆವು. ಆ ಸಮಯದಲ್ಲಿ ಲೋಕಾಯುಕ್ತ ಪೊಲೀಸರು ಪುರಾವೆಗಳನ್ನು ತೋರಿಸುತ್ತಿದ್ದರು/ಪರಿಶೀಲನೆ ಮಾಡುತ್ತಿದ್ದರು. ಆ ಸಮಯದಲ್ಲಿ ನಾನು ಅನೇಕ ರುಜು ಮಾಡಿದ್ದೇನೆ. ನಾನು ರುಜು ಮಾಡುವ ಮೊದಲು ನಾನು ರುಜು ಮಾಡಬೇಕಾದ ದಾಖಲೆಗಳಲ್ಲಿ ಏನು ವಿಚಾರ ಬರೆದಿದೆ ಎನ್ನುವುದನ್ನು ತಿಳಿಸುವಂತೆ ಪೊಲೀಸರಿಗೆ ಕೇಳಲಿಲ್ಲ.

80. ನಾನು ಲೋಕಾಯುಕ್ತ ಪೊಲೀಸರು ಹೇಳಿದಂತೆ ದಾಖಲೆಗಳ ಮೇಲೆ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

81. ನನಗೆ ಗುಂಡಾಪುರ ಗ್ರಾಮದ lineman ಜಿ. ಬಿ ಲೊಕೇಶ ಎನ್ನುವವರ ಪರಿಚಯ ಇಲ್ಲ. ಜಿ. ಬಿ ಲೊಕೇಶ ಎನ್ನುವವರು ನಮ್ಮ ಊರಿನಲ್ಲಿ CHESCOM lineman ಕೆಲಸ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಜಿ. ಬಿ ಲೊಕೇಶ ಮರಳು ಕಳ್ಳಸಾಗಾಣಿಕೆಯಲ್ಲಿ ಸೇರಿದ್ದರು ಮತ್ತು ಪೊಲೀಸರ ರೌಡಿಶೀಟಿನಲ್ಲಿ ಸೇರಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಜಿ. ಬಿ ಲೊಕೇಶ ಸರಿಯಾಗಿ CHESCOM lineman ಕೆಲಸ ಮಾಡದೇ ಇದ್ದುದರಿಂದ ಆತನ ಮೇಲೆ CHESCOM ಇಲಾಖೆಯವರು ಕ್ರಮ ಜರುಗಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

82. ನಾನು ನಮ್ಮ ಜಮೀನಿಗೆ ಟಿಸಿ ಕೂರಿಸಲು ಅರ್ಜಿ ಕೊಡದೇ ಇದ್ದರೂ ಸಹಿತ ಜಿ.ಬಿ.ಲೊಕೇಶನ ಚಿತಾವಣೆ ಮೇರೆಗೆ ಆರೋಪಿಯ ವಿರುದ್ಧ ಲೋಕಾಯುಕ್ತ ಪೊಲೀಸರಿಗೆ ಸುಳ್ಳು ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

83. ನಿಪಿ–34 ರಲ್ಲಿ ಗುರುತಿಸಿರುವ ಟ್ರಾಪ್ ಮಹಜರಿನ 5 ನೇ ಪುಟದಲ್ಲಿ ಪೊಲೀಸರು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತಕ್ಕೆ ಸಂಬಂಧಿಸಿದ ಶ್ರೀಮತಿ ರತ್ನಮ್ಮ, ಬೋರೇಗೌಡ, ಮತ್ತು ಪುಟ್ಟಸ್ವಾಮಿ ಗುರುದೇವರಹಳ್ಳಿ ಗ್ರಾಮ ರವರಿಗೆ ಸಂಬಂಧಿಸಿದ ಅನಧಿಕೃತ ಐ ಪಿ ಸೆಟ್ ಅನ್ನು ಅಧಿಕೃತ ಮಾಡಿಸುವ ಸಂಬಂಧ (ಅಕ್ರಮ ಸಕ್ರಮ) ತಯಾರಿಸಲಾಗಿರುವ ಎಸ್ಟಿಮೆಟ್ ಪ್ರತಿಯಾಗಿದ್ದು ಎಸ್ಟಿಮೆಟ್ ನಂಬರ್ ಮತ್ತು ದಿನಾಂಕ ಇರುವುದಿಲ್ಲ ಒಟ್ಟು 02 ಹಾಳೆಗಳಿರುತ್ತವೆ ಎಂದು ಬರೆದಿರಬಹುದು.

84. ನಾನು ಜಿ.ಬಿ. ಲೋಕೇಶನ ಮಾತು ಕೇಳಿಕೊಂಡು ಸಾಧ್ಯವಾದರೆ ಆರೋಪಿಗೆ ತೊಂದರೆ ಕೊಡಲು ಸುಳ್ಳು ದೂರು ಕೊಟ್ಟಿದ್ದೇನೆ ಮತ್ತು ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

85. ನನ್ನ ಸಮಕ್ಷಮ ಲೋಕಾಯುಕ್ತ ಪೊಲೀಸರು ಎಂಒ–1 ರಿಂದ 4 ರವರೆಗೆ ಗುರುತಿಸಿರುವ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ– ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ–

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.